

ಉರಿಯದಿದ್ದರೆ, ಧರೆ ಏನಾದರೇನು?

ಒಲೆ ಉರಿಸಲು ಸೌದೆಯಷ್ಟೇ ಅಲ್ಲ, ಸ್ಥಳೀಯವಾಗಿ ದೊರೆಯುವ ತೆಂಗಿನ ಚಿಪ್ಪು, ಜೋಳದ ದಿಂಡು, ಅಡಕೆ ಪಾರಿ, ಇತ್ಯಾದಿ, ಇತ್ಯಾದಿ ಏನೇ ಬಳಸಿಕೊಂಡರೂ ಹೊಗೆ ಅಡುಗೆಮನೆಯ ಅವಿಭಾಜ್ಯ ಅಂಗ, ದೊಡ್ಡ ಕಿಟಕಿಗಳೂ ಇಲ್ಲದ ಹಳೆಯ ಅಡಿಗೆ ಮನೆಗಳಲ್ಲಿ ಹೊಗೆ, ಮಸಿ ತಪ್ಪುವಂತೆಯೇ ಇಲ್ಲ. ಉರಿಯದ ಒಲೆಯನ್ನು ಊದಿ ಊದಿ ನಿತ್ರಾಣರಾದ ಗೃಹಿಣಿಯರೆಷ್ಟೋ. ಬೇಸಿಗೆಯಲ್ಲಿ ಹೇಗೋ ವಾಸಿ, ಮಳೆಗಾಲದಲ್ಲಂತೂ ಒದ್ದೆ ಸೌದೆಗಳು ಜೀವ ತಿನ್ನುತ್ತಿದ್ದವು. ಹೊಳೆಯುವ ಕಣ್ಣುಗಳ ಹೆಣ್ಣುಗಳನ್ನು ಕಾವ್ಯಗಳಲ್ಲಷ್ಟೆ ಕಾಣಬೇಕು, ಹೊಗೆ ಸೂಸುವ ಅಡುಗೆ ಮನೆಯ ಒಡತಿಯ ಕಣ್ಣು ಎಂದಿಗೂ ಮಾಸಲೇ.

ಕುವೆಂಪು ಅವರು ತಮ್ಮ ಮಹಾಕೃತಿ 'ಶ್ರೀರಾಮಾಯಣದರ್ಶನಂ'ನಲ್ಲಿ ವನವಾಸದ ಸಂದರ್ಭದಲ್ಲಿ ಸೀತೆ ಅಡುಗೆಗೆ ತೊಡಗಿದಾಗ ನಡೆದ ಒಂದು ದಿನದ ಅನುಭವ ವಿಶೇಷವನ್ನು ಹೃದಯಂಗಮವಾಗಿ ರೂಪಿಸಿದ್ದಾರೆ. ಸೀತೆ ಮೈತೊಳೆದು ಮಡಿಯುಟ್ಟು ಅಡಿಗೆಗೆ ತೊಡಗಿದ್ದಾಳೆ. ಒಲೆ ಉರಿಯುತ್ತಿಲ್ಲ. ಸೌದೆ ಹಸಿಯಿದೆ. ಎಲೆಮನೆಯನ್ನೆಲ್ಲ ಹೊಗೆ ತುಂಬಿಕೊಳ್ಳುತ್ತಿದ್ದು ಅವಳ ಮುಖ, ಮಡಿಗಳು ಮಸಿಯಾಗಿವೆ. ಅಡುಗೆ ಆಗಿಲ್ಲ. ರಾಮ ಆಗಲೇ ಬಂದು ಊಟ ಕೇಳುತ್ತಾನೆ. ಹಸಿ ಸೌದೆಯಿಂದ ಅಡುಗೆ ಹೇಗೆ ಆಗುತ್ತದೆ? ಹೊಗೆಯನ್ನೇ ಊಟ ಮಾಡಿ ಎಂದು ಸಿಡುಕುವ ಸೀತೆಯ ಮಸಿಮೂತಿಯನ್ನು ನೋಡಿ ರಾಮನಿಗೆ ನಗುವೋ ನಗು. ಬಂದು ನೋಡಿದ ಲಕ್ಷ್ಮಣನಿಗೆ ಮಾತ್ರ 'ನಗೆಗೆ ಮೀರಿರ್ದುದಾ ಧೂಮ ದೃಶ್ಯಂ' ಆತ ಬೇಗ ಒಣಗಿದ ಸೌದೆಯನ್ನು ತಂದು, ತನ್ನ ಹೆಂಡತಿಯನ್ನು ನೆನೆಯುತ್ತಾ ಒಲೆ ಊದಿದಾಗ ಅಗ್ನಿ ಧಗ್ಗನೆ ಚಿಮ್ಮಿ, ಸೀತೆಯ ಮುಖವೂ ಅರಳುತ್ತದೆ. ಆದರೆ ದುರ್ದೈವ, ಎಲ್ಲರ ಮನೆಯಲ್ಲೂ ಕೆಲಸಕ್ಕೆ ಕೈ ಜೋಡಿಸುವ ಲಕ್ಷ್ಮಣನಿಗಿಂತ ಅಡುಗೆಯಾಯಿತೆ ಎನ್ನುವ ರಾಮನಂಥವರೇ ಜಾಸ್ತಿ.

ಒಲೆ ರಚಿಸುವುದು ಹೇಗೆ ಒಂದು ಕೌಶಲವೋ ಹಾಗೆಯೇ ಒಲೆ ಉರಿಸುವುದೂ ಒಂದು ಕೌಶಲವೇ. ಅದು ಕಲೆಯೂ ಹೌದು, ವಿಜ್ಞಾನವೂ ಹೌದು. ಸೌದೆ ಚೆನ್ನಾಗಿಯೇ ಇರುಬಹುದು, ಅದನ್ನು ಬರೀ ಪೇರಿಸಿಟ್ಟರೆ ಒಲೆ ಉರಿಯುವುದಿಲ್ಲ, ಅದಕ್ಕೆ ಸರಿಯಾಗಿ ಗಾಳಿಯಾಡುವ ಅವಕಾಶ ಎರಡು ಸೌದೆಗಳ ನಡುವಿನ ಅಂತರ ಮತ್ತು ಸಂಬಂಧ, ಬೆಂಕಿ ಹೊತ್ತಿರುವ ಸೌದೆಯ ತುದಿ ಎಷ್ಟು ಪಟುವಾಗಿದೆ ಎಂದೆಲ್ಲ ನೋಡಿಕೊಳ್ಳಬೇಕು. ಒಲೆ ತುಂಬ ಸೌದೆ ತುಂಬಬಾರದು. ಸಾಧಾರಣವಾಗಿ ಒಲೆ ಹತ್ತಿಸುವಾಗ ಎಣ್ಣೆ, ಕಾಗದದ ಚೂರು, ತೆಂಗಿನ ನಾರು, ಹತ್ತಿಯ ಬತ್ತಿ ಇಂಥವನ್ನು ಬಳಸುತ್ತಾರೆ. ನನಗೆ ತಿಳಿದಿದ್ದ ಹಿರಿಯಾಕೆಯೊಬ್ಬರು ತಮ್ಮ ಜೀವನದಲ್ಲಿ ಎಂದೂ ಒಲೆ ಹೊತ್ತಿಸಲು ಕಾಗದವನ್ನು ಬಳಸಲಿಲ್ಲ. 'ಯಾವ ಜನ್ಮದ ಪಾಪವೋ ಸರಸ್ವತಿ ನನ್ನತ್ತ ಸುಳಿಯಲಿಲ್ಲ, ಈಗ ಅವಳನ್ನು ಸುಟ್ಟರೆ ಮುಂದಿನ ಜನ್ಮದಲ್ಲೂ ನನಗೆ ಇಷ್ಟೇ ಗತಿ' ಎಂದು ಹೆದರುತ್ತಿದ್ದರು.

ದೇವರು ಹೋದರೆ ಅದರ ಹಿಂದೆ ಪರಿವಾರದವರೂ ಹೊರಟು ಹೋಗುವಂತೆ ಒಲೆಗಳು ಮಾಯವಾಗುತ್ತಿರುವ ಈ ಹೊತ್ತಿನಲ್ಲಿ ಆ ಸಂಬಂಧದ ಪದಗಳೂ ಮರೆಯುತ್ತಿವೆ. ಒಲೆ ಮೊರೆಯುತ್ತಿದೆ, ಬೆಂಕಿ ಕವರಿಕೊಳ್ಳುತ್ತಿದೆ, ಕೆಂಡ ಕಳಲುತ್ತದೆ, ಬೆಂಬೂದಿ, ಒಲೆಯ ಗುಪ್ಪು, ಕೆಂಡ ಹಿರಿ, ಕೆಂಡದತಟ್ಟೆ ಮುಂತಾದವುಗಳನ್ನು ಹೇಳಲು ಈಗ ಅವಕಾಶವೆಲ್ಲಿ? ಕೆಂಡವೇ ಇಲ್ಲದ ಕಡೆ ಕೆಂಡದ ತಟ್ಟೆ ಏಕೆ? ಪದಗಳಿಗಿಂತ ಗಾದೆಗಳು ಎಷ್ಟೋ ವಾಸಿ. ಏಕೆಂದರೆ ಒಲೆ ಬದಲಾದರೂ, ಬದುಕು ಬದಲಾಗಿಲ್ಲವಲ್ಲ. ಉದಾಹರಣೆಗೆ ನೋಡಿ: 'ಒಪ್ಪತ್ತಿಗಿದೆ ಅಂತ ಒಲೆ ಅಗೆದು ಹಾಕಿದ್ರು', 'ಆಡಿದ್ರೆ ಆಟ, ಹೂಡಿದ್ರೆ ಒಲೆ', 'ಒಳ್ಳೆಯವ್ನು ಒಳ್ಳೆಯವ್ನು ಅಂದ್ರೆ ಒಲೆ ಮುಂದೆ ಬಂದು ಹೇತ', 'ಮಾತು ಮನೆ ಕೆಡಸ್ತು ತೂತು ಒಲೆ ಕೆಡಸ್ತು', 'ಕೆಟ್ಟ ಮೇಲೆ ಬುದ್ಧಿ ಬಂತು ಅಟ್ಟ ಮೇಲೆ ಒಲೆ ಉರೀತು'. ಎಲ್ಲವೂ ನಿಜವೆ. ಆದರೆ 'ಒಲೆಗೊಂದು ಒದೆಗೊರಡು ಮನೆಗೊಂದು ಮುದಿಗೊರಡು' ಎನ್ನುವ ಗಾದೆ ಮಾತ್ರ ನಾಣ್ಯತೆ ಕಳೆದುಕೊಳ್ಳುತ್ತಿದೆ. ಮನೆಗೊಂದು ಮುದಿಜೀವ ಬೇಕು ಎಂದು ಇಂದು ಹಂಬಲಿಸುವವರು ಯಾರು? ಹಾಗೆ ಇದ್ದರೆ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಈ ಪಾಟಿ ವೃದ್ಧಾಶ್ರಮಗಳು ನಾಯಿಕೊಡೆಗಳಂತೆ ಏಕೆ ತಲೆ ಎತ್ತುತ್ತಿವೆ? ನಮ್ಮ ಸರ್ವಜ್ಞ ಕವಿಯೂ ಲೇಸಿನ ಪಟ್ಟಿ ನೀಡುತ್ತಾ 'ಮನೆಗೊಬ್ಬ ಅಜ್ಜಿಯೇ ಲೇಸು' ಎನ್ನುತ್ತಾನೆ. ಅಪ್ಪ–ಅಮ್ಮನೇ ಬೇಡವೆನಿಸುವಾಗ ಅಜ್ಜ–ಅಜ್ಜಿಯರು ತುಂಬಾ ದೂರ. ಇಂಥ ಪರಿಯ ಬದುಕಿನಲ್ಲಿ ಹೊಸ ಗಾದೆಗಳು ಹುಟ್ಟುತ್ತವೆಯೆ?

ಮಹಾನಗರಗಳ ಮನೆಮನೆಗಳಲ್ಲಂತೂ ಗ್ಯಾಸ್ ಒಲೆಗಳು ಬಂದು ಕೂತಿವೆ. ಹಳ್ಳಿಗಳಲ್ಲೂ ಗ್ಯಾಸ್ ಒಲೆ, ಗೋಬರ್ ಗ್ಯಾಸ್ ಒಲೆ, ಸೀಮೆಎಣ್ಣೆ ಸ್ಟವ್ ಇತ್ಯಾದಿಗಳು ಬಂದಾಗಿವೆ. ಇವು ಮಹಿಳೆಯರಿಗೆ ಮಾಡಿರುವ ಮಹದುಪಕಾರವನ್ನು ಮರೆಯುವಂತೆಯೇ ಇಲ್ಲ. ದಿನದಿನ ಸೌದೆ ಹೊಂಚಬೇಕಿಲ್ಲ. ಹೊಗೆ ಇಲ್ಲ, ಮಸಿ ಇಲ್ಲ. ಹಿಂದೆ ಪುರಾಣಕಾಲದಲ್ಲಿ ನಳ ಮಹಾರಾಜನಿಗೆ ಬೇಕೆಂದಾಗ ಬರಿಗೈಯಲ್ಲಿ ಬೆಂಕಿಯನ್ನು ಸೃಷ್ಟಿಸಿಕೊಳ್ಳುವ ವರವಿತ್ತಂತೆ. ಆಧುನಿಕ ಒಲೆ ಇದ್ದವರು ಈ ನಳನಿಗೇನೂ ಕಡಿಮೆಯಿಲ್ಲ. ಒಂದು ಕೈ ಚಲನೆ ಮಾತ್ರದಿಂದ ಬೆಂಕಿ ಉರಿಯುತ್ತದೆ, ಆರುತ್ತದೆ, ನಾವು ಹೇಳಿದಂತೆ ಕೇಳುತ್ತದೆ. ನಮಗೆ ರೇಜಿಗೆಯಿಂದ ಬಿಡುಗಡೆಯ ಹಾದಿ ದೊರೆತಿದೆ. ಎಲ್ಲವೂ ನಿಜ, ಆದರೆ... ಈ ಆದರೆ ಎಂಬ ಭಯಂಕರ ಜಾಡ್ಯ ಮನಸ್ಸಿನಲ್ಲಿದೆಯಲ್ಲ, ಅದಕ್ಕೆಲ್ಲಿಯ ಸಾಂತ್ವನ?

ನಮ್ಮ ಆಯ್ಕೆಯ ಮಣ್ಣಿನಲ್ಲಿ, ನಮ್ಮದೇ ಮನೆಯಲ್ಲಿ, ನಮ್ಮದೇ ಕೈಯಲ್ಲಿ, ನಮ್ಮ ಕಣ್ಣೆದುರೇ ವೆಚ್ಚವಿಲ್ಲದೆ, ಆತ್ಮೀಯತೆಯಿಂದ ತಯಾರಾಗುತ್ತಿದ್ದ ಸರಳ ಒಲೆಗೆ ಅಥವಾ ಅದು ಪ್ರತಿನಿಧಿಸುವ ಬದುಕಿನ ವಿಧಾನಕ್ಕೆ ಈಗ ಜಾಗವೆಲ್ಲಿ? ದುಡ್ಡೊಂದಿದ್ದರೆ ಸಾಕು, ಲೋಕದ ಯಾವ ಪದಾರ್ಥವನ್ನು ಬೇಕಾದರೂ ಕೊಳ್ಳಬಹುದೆಂಬ ನಮ್ಮ ಅಹಂಕಾರ ನಮ್ಮನ್ನು ನಿಧಾನವಾಗಿ ಕೌಶಲಗಳಿಂದ, ತನ್ಮಯತೆಯಿಂದ, ಸರಳತೆಯಿಂದ ದೂರ ಮಾಡುತ್ತಿದೆ ಎನಿಸುವುದಿಲ್ಲವೆ? ಹೂವು ಕಟ್ಟಬೇಕಾಗಿಲ್ಲ, ಉಪ್ಪಿನಕಾಯಿ ಹಾಕಬೇಕಿಲ್ಲ, ಹೋಳಿಗೆ ಮಾಡಬೇಕಿಲ್ಲ, ಕಚ್ಚೆಪಂಚೆಯೂ ರೆಡೀಮೇಡ್ ಸಿಕ್ಕುತ್ತದೆ, ಬಾಯಿ ಮೊಸರಾಗಲು ನಾವೇ ಕೈ ಕೆಸರು ಮಾಡಿಕೊಳ್ಳಬೇಕಾಗಿಲ್ಲ. ಯಾರೋ ಮಾಡುತ್ತಾರೆ, ಕೊಳ್ಳಲು ಮಸ್ತಾಗಿ ದುಡ್ಡಿದರೆ ಸರಿ. ಎಲ್ಲದರಲ್ಲೂ ವೈಯಕ್ತಿಕ ಕುರುಹುಗಳನ್ನು ಕಳೆದುಕೊಂಡು, ಸೌಲಭ್ಯದ ಹೆಸರಿನಲ್ಲಿ ಏಕರೂಪಿ ಜೀವನ ವಿಧಾನಕ್ಕೆ ಒಗ್ಗಿಹೋದರೆ ಇದರಲ್ಲಿ ರುಚಿ ಕಾಣುವುದು ಹೇಗೆ?

ನಮಗೆ ಹೊಸ ಬಗೆಯ ಅನುಕೂಲ ಬೇಕು, ಹಳೆ ಬಗೆಯ ಸ್ವಂತಿಕೆ ಬೇಕು. ಎರಡರ ನಡುವಣ ಸುವರ್ಣ ಮಾಧ್ಯಮ ಮಾರ್ಗ ಎಲ್ಲಿದೆ? ಆಧುನಿಕತೆ, ತಾಂತ್ರಿಕತೆಗಳು ಮೇಲುಗೈ ಆಗಿರುವಂತೆ ಕಾಲರಾಯನೇ ನಾಗಲೋಟದಲ್ಲಿ ಓಡುತ್ತಿರುವಾಗ ನಾವು ಮಾತ್ರ ಹಿಂದಕ್ಕೆ ಹೋಗಲಾರೆವಷ್ಟೆ. ಅವನ ಪದಹತಿಯಲ್ಲಿ ಸಾವಿರ ಸಂಗತಿಗಳು ಹುಡಿಗೂಡುತ್ತವೆ, ಹೊಸತು ಹುಟ್ಟುತ್ತವೆ. ನಾವು ಬೇಕೆಂದರೂ ಅಷ್ಟೆ ಬೇಡವೆಂದರೂ ಅಷ್ಟೆ, ಕಾಲಾಯ ತಸ್ಮೈ ನಮಃ.

ಪ್ರತಿಕ್ರಿಯಿಸಿ: **feedback@sudha.co.in**